ಕರ್ನಾಟಕ ಸರ್ಕಾರ
ಹೇಳಿಕೆ ಹಾಳೆ
(ಆರ್ ಪಿ ಸಂಖ್ಯೆ57)
ನಮೂನೆ ಸಂಖ್ಯೆ4

ಸಿ ಆರ್ ಪಿ 67

ಪ್ರಧಾನ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಸಿಂಧನೂರು

PC No.73/2022 CW-1

ಹೆಸರು : ದುರುಗಪ್ಪ
ತಂದೆಯ ಹೆಸರು : ಕೆಂಚಪ್ಪ
ವಯಸ್ಸು : 50 ವರ್ಷ
ಉದ್ಯೋಗ : ವ್ಯಾಪಾರ
ವಾಸಸ್ಥಳ : ಸಿಂಧನೂರು

ಸಾಕ್ಷಿಗೆ ಪ್ರಮಾಣ ವಚನ ಬೋಧಿಸಿದ ದಿನಾಂಕಃ 06-08-2022

ಸಾಕ್ಷಿಯ ಪ್ರಮಾಣ ಪೂರ್ವಕ ಹೇಳಿಕೆ

ದಿಃ 07-02-2022 ರಂದು ಮಧ್ಯಾಹ್ನ 12-30 ಗಂಟೆ ಸುಮಾರಿಗೆ, 1 ರಿಂದ 3 ನೇ ಆರೋಪಿತರು ಕಾಟೀ ಬೇಸನಲ್ಲಿರುವ ವಾರ್ಡ್ ನಂ. 6 ರಲ್ಲಿ ನಮ್ಮ ಮನೆ ಬಳಿ ಬಂದು, ನಮಗೆ ಕೋರ್ಟ್ ಆದೇಶವಾಗಿದೆ. ಈ ಜಾಗ ನಮ್ಮದು ಎಂದು ಹೇಳಿ ಜೆಸಿಬಿ ತೆಗೆದುಕೊಂಡು ಬಂದು ನಮ್ಮ ಸ್ವಲ್ಪ ಕಟ್ಟಡವನ್ನು ಒಡೆಯಲು ಬಂದರು. ಆಗ ನಾನು ನ್ಯಾಯಾಲಯದ ಆದೇಶ ನಿಮ್ಮ ಪರವಾಗಿ ಆಗಿರಬಹುದು ಆದರೆ ನಿಮ್ಮ ಜಾಗ ಮುಂದೆ ಇರುವ ಜಾಗ ಇರುತ್ತದೆ, ಈ ಜಾಗ ನಿಮ್ಮದು ಅಲ್ಲ ಎಂದು ಹೇಳಿದೆ. ಆದರೂ ಸಹ ಆರೋಪಿತರು ಅದನ್ನು ಕೇಳದೇ ಅವರೊಂದಿಗೆ ಬೇರೆ ಜನರನ್ನು ಕರೆದುಕೊಂಡು ಬಂದಿದ್ದರು. ಅದೇರೀತಿ ಅವರ ಜೊತೆ ಪೋಲೀಸರು ಸಹ ಇದ್ದರು. ನಾವು ಹೇಳಿದರೂ ಸಹ ಕೇಳಲಿಲ್ಲ. ಆನಂತರ ನಾವು ಪೋ.ಠಾಣೆಗೆ ಹೋದೆವು. ಆಗ ಒಬ್ಬ ಮಹಿಳಾ ಪೋಲೀಸರು ಬಂದು ಅದನ್ನು ಒಡೆಯಬೇಡಿ ಎಂದು ಹೇಳಿ ಹೋದರು. ಮಹಿಳಾ ಪೋಲೀಸರು ಹೋದ ನಂತರ ಆರೋಪಿತರು ಜೆಸಿಬಿ ಯಿಂದ ನಮ್ಮ ಕಟ್ಟಡವನ್ನು ಬಿಳಿಸಿ ಹೋದರು.

ಈ ಬಗ್ಗೆ ದೂರು ನೀಡಲು ಸಿಂಧನೂರು ಪೋ.ಠಾಣೆಗೆ ಹೋದೆನು ಅವರು ನನ್ನ ದೂರನ್ನು ಸ್ವೀಕರಿಸಲಿಲ್ಲ. ಈ ಬಗ್ಗೆ ಎಸ್ ಪಿ ರವರಿಗೆ ಮನವಿ ಪತ್ರವನ್ನು ಕಳುಹಿಸಿದೆ ಆ ನಂತರ ನ್ಯಾಯಾಲಯಕ್ಕೆ ಬಂದು ದೂರು ಸಲ್ಲಿಸಿದ್ದೇನೆ. ಆರೋಪಿತರು ಮತ್ತೇನು ಅಂದಿರುವುದಿಲ್ಲ. ಆಗ ಆರೋಪಿತರು ಸುಮ್ಮನೆ ಹೋಗಿ ಬಿಡಿ ಇಲ್ಲದಿದ್ದರೇ ಹೊಡೆಯುತ್ತೇವೆ, ಬಡಿಯುತ್ತೇವೆ ಎಂದು ಧಮಕಿ ಹಾಕಿರುತ್ತಾರೆ.

ಆದ್ದರಿಂದ ನನಗೆ ನ್ಯಾಯ ಒದಗಿಸಿ ಕೊಟ್ಟು ಆರೋಪಿತರ ವಿರುದ್ದ ಕ್ರಮ ಜರುಗಿಸಬೇಕೆಂದು ಕೋರುತ್ತೇನೆ.

(ನನ್ನ ಉಕ್ತದ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿರುತ್ತಾರೆ)

ಓ ಹೇ ಕೇ ಸರಿ ಇದೆ.

ಪ್ರಧಾನ ಜೆ.ಎಮ್.ಎಫ್.ಸಿ., ಸಿಂಧನೂರು.